## 3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ.

**ಪಿ.ಸಿ.ಆರ್. ನಂ.669/2015 ಚಾ ಸಾ-1**

| | |
|---|---|
| ಸಾಕ್ಷಿದಾರರ ಹೆಸರು | ಸುಷ್ಮಾ.ಕೆ. |
| ಗಂಡನ ಹೆಸರು | ಪದ್ಮಾಪ್ಪ. |
| ವಯಸ್ಸು | 33 ವರ್ಷ |
| ಉದ್ಯೋಗ | ಗೃಹಿಣಿ. |
| ವಾಸ | ನಂದಿನಿ ಲೇಔಟ್, ಬೆಂಗಳೂರು |
| ಪ್ರಮಾಣೀಕರಿಸಿದ ದಿನಾಂಕ | 15.07.2025. |

**ಭಾ.ನಾ.ಸು.ಸಂ.ಕಲಂ.223 ರಡಿಯಲ್ಲಿ ಸಾಕ್ಷಿಗೆ ಪ್ರಮಾಣ ಪೂರ್ವಕ ಹೇಳಿಕೆಃ**

ದಿ.06.02.2021 ರಂದು ನಾನು ಮತ್ತು ನನ್ನ ಗಂಡ ಹಾಗೂ ಮಕ್ಕಳು ನಂದಿನಿಲೇಔಟ್ ನಲ್ಲಿರುವ ಮನೆಗೆ ನಾವು ಭೋಗ್ಯಕ್ಕೆ ಹೋಗಿರುತ್ತೇವೆ. ಸದರಿ ಭೋಗ್ಯದ ಅವಧಿ ಮೂರು ವರ್ಷಗಳಾಗಿತ್ತು. ಸದರಿ ಮನೆಯ ಮಾಲೀಕರಾದ ಒಂದು ಮತ್ತು ಎರಡನೇ ಆರೋಪಿತರಾದ ಹೆಸರು ಶ್ರೀಮತ. ಸೌಮ್ಯ ಮತ್ತು ಶ್ರೀಮತಿ.ವಿಜಯ ಹೆಸರಿನಲ್ಲಿತ್ತು. ಸದರಿ ಭೋಗ್ಯದ ಮೊತ್ತ ರೂ.13ಲಕ್ಷ ಆಗಿರುತ್ತದೆ. ಅದರಲ್ಲಿ ರೂ.1,75,000/- ನಗದಾಗಿ ನೀಡಿದ್ದು, ಉಳಿದ ರೂ.11,25,000/- ಹಣವನ್ನು ಬ್ಯಾಂಕಿನ ಮೂಲಕ ಆರೋಪಿತರ ಖಾತೆಗೆ ವರ್ಗಾವಣೆ ಮಾಡಿರುತ್ತೇನೆ. ಸದರಿ ಮನೆಯಲ್ಲಿ ನಮಗೆ ವಾಸ ಮಾಡಲು ಹಲವಾರು ಸಮಸ್ಯೆಗಳು ಇದುದ್ದರಿಂದ ಸದರಿ ಮನೆಯ ಮಾಲೀಕರು ನಮಗೆ ಸರಿಯಾದ ಸೌಲಭ್ಯ ಒದಗಿಸದ ಕಾರಣ ಮನೆಯನ್ನು ಖಾಲಿ ಮಾಡುತ್ತೇವೆ ಎಂದು ಆರೋಪಿತರಿಗೆ ಆರು ತಿಂಗಳ ಮೊದಲೇ ಹೇಳಿದ್ದೇವು. ಆದರೆ ಸದರಿ ಮನೆಯ ಮಾಲೀಕರು ನಮ್ಮ ಸಮಸ್ಯೆಗಳಿಗೆ ಸ್ಪಂದಿಸದೇ ಇರುವ ಕಾರಣ ಮನೆಯನ್ನು ಖಾಲಿ ಮಾಡಿರುತ್ತೇವೆ. ಆ ಸಮಯದಲ್ಲಿ ಆರೋಪಿತರು ನಮಗೆ ರೂ.12, 19,750/- ಹಣವನ್ನು ವಾಪಸ್ ನೀಡಿರುತ್ತಾರೆ. ಆದರೆ ಉಳಿದ ಹಣವನ್ನು ರೂ.80,250/- ಹಣವನ್ನು ಆರೋಪಿತರು ವಾಪಸ್ ಕೊಟ್ಟಿರುವುದಿಲ್ಲ. ಈ ಬಗ್ಗೆ ಆರೋಪಿತರು ದಿ.15.10.2023 ರ ಮೊದಲು ನಿಮಗೆ ವಾಪಸ್ ನೀಡುತ್ತೇವೆ ಎಂದು ಹೇಳಿದ್ದು ಇಲ್ಲಿಯವರೆಗೆ

ನನಗೆ ಬಾಕಿ ಹಣವನ್ನು ನೀಡಿರುವುದಿಲ್ಲ. ಈ ಬಗ್ಗೆ ಆರೋಪಿತರ ಬಳಿ ನನ್ನ ವಾಪಸ್ ಕೊಡಿ ಎಂದು ಕೇಳಿದಾಗ ಆರೋಪಿತರು ನಿಮಗೆ ಯಾವುದೇ ಹಣವನ್ನು ನಾವು ನೀಡುವುದಿಲ್ಲ ಎಂದು ನನ್ನ ಮೇಲೆ ಗಲಾಟೆ ಮಾಡಿರುತ್ತಾರೆ. ಹಾಗಾಗಿ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸಾಕ್ಷಿಯು ದಿ.06.02.2021 ರ ಭೋಗ್ಯ ಕರಾರು ಪತ್ರವೂ ರದ್ದಾಗಿದ್ದು, ಸದರಿ ಭೋಗ್ಯ ಕರಾರು ಪತ್ರದ ಪುಟ ಸಂಖ್ಯೆಃ 4 ರಲ್ಲಿ ಆರೋಪಿತರು ನೀಡಿರುವ ಹಣ ಮತ್ತು ಉಳಿಕೆ ಬಾಕಿ ಹಣದ ಬಗ್ಗೆ ಹಿಂಬರಹವನ್ನು ಬರೆದುಕೊಟ್ಟಿದ್ದು, ಸದರಿ ಹಿಂಬರಹವನ್ನು ನಿಸಿ.1 ಎಂದು, ಸಾಕ್ಷಿ ಸಹಿಯನ್ನು ನಿಸಿ.1(ಎ) ಎಂದು ಗುರುತಿಸಲಾಯಿತು. ದಿ.03.08.2024 ರ ಸ್ವೀಕೃತಿಯನ್ನು ನಿಸಿ.2 ಎಂದು, ದಿ.03.08.2024 ರ ಹಿಂಬರಹವನ್ನು ನಿಸಿ.3 ಎಂದು, ಎರಡು ಅಂಚೆ ರಸೀದಿಗಳನ್ನು ನಿಸಿ.4 ಮತ್ತು 5 ಎಂದು, ದಿ.22.04.2014 ರ ಲೀಗಲ್ ನೋಟಿಸ್ ನ್ನು ನಿಸಿ.6 ಎಂದು, 04.06.2024 ರ ಲೀಗಲ್ ನೋಟಿಸ್ ನ್ನು ನಿಸಿ.7 ಎಂದು, ಜಾರಿಯಾಗದೇ ವಾಪಸ್ ಆದ ಎರಡು ಅಂಚೆ ಲಕೋಟೆಗಳನ್ನು ನಿಸಿ.8 ಮತ್ತು 9 ಎಂದು ಗುರುತಿಸಲಾಯಿತು. ಆದ್ದರಿಂದ, ಆರೋಪಿತರ ವಿರುದ್ದ ಸೂಕ್ತ ಕಾನೂನು ಕ್ರಮ ಎರುಗಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

*ಮರುವಿಚಾರಣೆಃಇಲ್ಲ.*

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**

Complainant present. **Sworn statement of complainant is recorded as CW-1 and documents are marked as Ex.C.1 to 9.** Sworn statement as CW-1. Closed.
For Hearing. Call on 23.08.2025.

III Addl.C.J.M, Bengaluru.